

ಇಂಗ್ಲಿಷ್ ಮೂಲ: **ದಿಲೀಪ್ ಚಿತ್ರೆ**
ಕನ್ನಡಕ್ಕೆ: **ಪದ್ಮರಾಜ ದಂಡಾವತಿ**



# ಅಪ್ಪ ಮನೆಗೆ ಮರಳಿ ಬಂದರು

ನಮ್ಮಪ್ಪ ಸಂಜೆ ತಡವಾಗಿ ಹೊರಟ ರೈಲು ಏರುತ್ತಾರೆ
ಹಳದಿ ದೀಪಗಳ ಅಡಿಯಲ್ಲಿ ದೈನಿಕ ಮೌನಿ ಪಯಣಿಗರ ನಡುವೆ ನಿಲ್ಲುತ್ತಾರೆ
ಕಿಟಕಿಯಾಚೆ ಸರಿದು ಹೋಗುವ ಪಟ್ಟಣಗಳನ್ನು ಅವರ ಕಣ್ಣುಗಳು ಗಮನಿಸುವುದಿಲ್ಲ
ಅವರ ಅಂಗಿ ಪ್ಯಾಂಟು ಒದ್ದೆಯಾಗಿವೆ. ಕಪ್ಪು ರೇನ್‌ಕೋಟಿಗೆ
ಮಣ್ಣು ಮೆತ್ತಿದೆ. ಅವರ ಹೆಗಲ ಚೀಲದ ಪುಸ್ತಕಗಳು
ಇಡಿಕಿರಿದು ತುಂಬಿ ಹೊರಚೆಲ್ಲುತ್ತಿವೆ. ವಯಸ್ಸಿನ ಭಾರದಿಂದ ಅವರ ಕಣ್ಣ ಕಾಂತಿ ಕುಂದಿದೆ
ಅವರು ಮನೆಯತ್ತ ಹೊರಟಿದ್ದಾರೆ ಮಳೆಗಾಲದ ತಣ್ಣನೆಯ ರಾತ್ರಿಯಲ್ಲಿ.
ಅವರು ರೈಲಿನಿಂದ ಇಳಿಯುತ್ತಿರುವುದನ್ನು ಈಗ ಕಂಡೆ
ಉದ್ದನೆಯ ಒಂದು ವಾಕ್ಯದಿಂದ ಜಾರಿದ ಒಂದು ಶಬ್ದದಂತೆ.

ಬೂದು ಬಣ್ಣದ ಉದ್ದನೆಯ ಪ್ಲಾಟ್‌ಫಾರಂನ್ನು ಅವಸರದಲ್ಲಿ ದಾಟುತ್ತಿದ್ದಾರೆ,
ರೈಲು ಹಳಿ ದಾಟಿ, ಮನೆ ದಾರಿ ಹಿಡಿದಿದ್ದಾರೆ,
ಕೆಸರು ಮೆತ್ತಿದ ಚಪ್ಪಲಿ ನೆಲಕ್ಕೆ ಅಂಟಿಕೊಂಡರೂ ಕಾಲು ಕಿತ್ತುಕೊಂಡು ಬರುತ್ತಿದ್ದಾರೆ.
ಮತ್ತದೇ ಮನೆ, ಅದೇ ನೀರು ಚಹಾ ಕುಡಿಯುತ್ತ ಕುಳಿತುದನ್ನು ನೋಡುತ್ತೇನೆ.
ತಂಗಳು ಚಪಾತಿ ತಿನ್ನುತ್ತ, ಪುಸ್ತಕದಲ್ಲಿ ಮುಳುಗಿದ್ದಾರೆ.
ಕಕ್ಕಸಿನಲ್ಲಿ ಕುಳಿತು ಯೋಚಿಸಲು ಹೋಗುತ್ತಾರೆ
ಮನುಷ್ಯ ಜಗತ್ತಿನಿಂದ ಕಳಚಿಕೊಂಡ ಮನುಷ್ಯನನ್ನು ಕುರಿತು.
ಹೊರಗೆ ಬಂದು ಸಿಂಕ್ ಬಳಿ ನಿಂತ ಅವರು ನಡುಗುತ್ತಿದ್ದಾರೆ.
ಅವರ ಕಂದು ಕೈಗಳ ಮೇಲೆ ತಣ್ಣನೆಯ ನೀರು ಹರಿಯುತ್ತದೆ,
ಅವರ ಮುಂಗೈನ ಬಿಳುಚಿದ ಕೂದಲಿಗೆ ಕೆಲವು ಹನಿಗಳು ಅಂಟಿಕೊಳ್ಳುತ್ತವೆ.
ಉದಾಸ ಮಕ್ಕಳು ಅಪ್ಪನ ಜತೆ ಬೇಡ ಎಂದು

ತಮ್ಮತಮ್ಮೊಳಗೆ ಜೋಕು, ಗುಟ್ಟು ಹಂಚಿಕೊಳ್ಳುತ್ತಾರೆ. ಅವರು ಈಗ ಮಲಗಲು ಹೊರಡುತ್ತಾರೆ
ಪಕ್ಕದ ರೇಡಿಯೊದ ಕೊರ ಕೊರ ಸದ್ದು ಕೇಳುತ್ತ
ತಮ್ಮ ತಂದೆ ತಾತಂದಿರು ಮತ್ತು ಮೊಮ್ಮಕ್ಕಳನ್ನು ಕುರಿತು ಕನಸು ಕಾಣುತ್ತಾರೆ
ಅಥವಾ ಇಕ್ಕಟ್ಟು ಕಣಿವೆಗಳ ಹಾದು ಉಪಖಂಡ ಸೇರುವ ಅಲೆಮಾರಿಗಳನ್ನು ಕುರಿತು ಯೋಚಿಸುತ್ತಾರೆ.